# ಬಿತ್ತಿದಂತೆ ಬೆಳೆ, ಬೆಳೆಸಿದಂತೆ ಮಗು

**ಮಗ ಉಡುಗೊರೆಯಾಗಿ ನೀಡಿದ ಪೆನ್ನು – ಮಕ್ಕಳ ಬೆಳವಣಿಗೆಯ ಕುರಿತಂತೆ ಪಾಲಕರ ಜವಾಬ್ದಾರಿಯ ಕುರಿತ ಚಿಂತನೆಗೆ ಕಾರಣವಾಯಿತು.**

■ ಡಾ. ಕೆ.ಬಿ. ರಂಗಸ್ವಾಮಿ




ಒಂದು ಸಂಜೆ ಮನೆಗೆ ಮರಳುವ ಸಮಯಕ್ಕೆ ಸರಿಯಾಗಿ ನಮ್ಮ ಹತ್ತು ವರ್ಷದ ಪುಟಾಣಿ ಸೈಕಲ್ ಏರಿ ಎಲ್ಲಿಗೋ ಹೊರಡುವ ತರಾತುರಿಯಲ್ಲಿದ್ದ. 'ಎಲ್ಲಿಗೋ ಹೊರಟ ಹಾಗಿದೆ' ಎಂದೆ ನಾನು. 'ಟೀಚರ್ಸ್ ಡೇಗೆ ಗುರೂಜಿಗಳಿಗೆ ಕೊಡಲು ಪೆನ್ ತರಲು ಹೋಗುತ್ತಿದ್ದೇನೆ' ಎಂದ. ನಾನು ಬಾಯಿ ಬಿಡುವ ಮೊದಲೇ–'ಕೂಡಿಟ್ಟಿದ್ದ ಅವನದೇ ದುಡ್ಡು ತೆಗೆದುಕೊಂಡು ಹೋಗುತ್ತಿದ್ದಾನೆ' ಎಂದಳು ಅಲ್ಲೇ ನಿಂತಿದ್ದ ಅವನ ಅಮ್ಮ.

ಒಂದು ಪುಟ್ಟ ಡಬ್ಬಿಯಲ್ಲಿ ಅವರಿವರು ಕೊಟ್ಟ ಹಣವನ್ನು ಕೂಡಿಡುವ ಅಭ್ಯಾಸ ಬೆಳೆಸಿಕೊಂಡಿದ್ದಾನೆ ಅವನು. ಸದ್ಯ ನನ್ನ ಜೇಬಿಗೆ ಕತ್ತರಿ ಬೀಳಲಿಲ್ಲವಲ್ಲ ಎಂದುಕೊಂಡು, ಯಾವಾಗಲೂ ಹೇಳುವಂತೆ 'ಹುಷಾರಾಗಿ ಹೋಗಿ ಬಾ' ಎಂದು ಹೇಳಿ ಕಳಿಸಿದೆ. ವಾಪಸ್ ಬಂದ ಅವನು ತಾನು ತಂದಿದ್ದ ಆರು ಪೆನ್ನುಗಳನ್ನು ತೋರಿಸಿದ. ಅವೇನೂ ಅಂತಹ ದುಬಾರಿ ಪೆನ್ನುಗಳಾಗಿರದೆ ಮಾಮೂಲಿ ಪೆನ್ನುಗಳಾಗಿದ್ದವು. ಬೆಲೆಗಿಂತ ಅದರಲ್ಲಿ ತುಂಬಿರುವ ಪ್ರೀತಿ ಮುಖ್ಯ ಎಂದುಕೊಂಡು 'ಎಷ್ಟು ಜನ ಗುರೂಜಿಗಳಿಗೆ ಕೊಡುತ್ತೀಯ?' ಎಂದೆ. 'ನಮಗೆ ಕ್ಲಾಸ್ ತೆಗೆದುಕೊಳ್ಳುವವರು ಒಟ್ಟು ಆರು ಜನ. ಎಲ್ಲರಿಗೂ ಒಂದೊಂದು ಕೊಡುತ್ತೀನಿ' ಎಂದ. 'ಸರಿಯಪ್ಪ' ಎಂದು ಸುಮ್ಮನಾದೆ.

ಮರುದಿನ ಬೆಳಿಗ್ಗೆ ಎಂದಿನಂತೆ ತಯಾರಾದ ನಾನು ಇನ್ನೇನು ಹೊರಗಡಿಯಿಡಬೇಕು ಎನ್ನುವಷ್ಟರಲ್ಲಿ ಯೂನಿಫಾರಂ ತೊಟ್ಟಿದ್ದ ಅವನು ಹಾಜರಾಗಿ – 'ಅಪ್ಪಾಜಿ ಹ್ಯಾಪಿ ಟೀಚರ್ಸ್ ಡೇ' ಎನ್ನುತ್ತಾ ನನಗಾಗಿ ತಂದಿದ್ದ ಒಂದು ಪೆನ್ ಕೊಟ್ಟ. ಅದನ್ನು ನನಗೆ ಕೊಡುವ ಕುರಿತು ಒಂದಿನಿತೂ ಸುಳಿವು ನೀಡಿರಲಿಲ್ಲ. ಅವನಮ್ಮನಿಗೂ ಈ ಬಗ್ಗೆ ಹೇಳಿರಲಿಲ್ಲವಂತೆ. ಅತ್ಯಂತ ಸರ್‌ಪ್ರೈಸ್ ಆಗಿ ಜರುಗಿದ ಈ ಕ್ರಿಯೆಯಿಂದ ನನಗೆ ಅತ್ಯಂತ ಸಂತೋಷವಾಗಿ ಥಟ್ಟನೆ ಅವನನ್ನು ಬರಸೆಳೆದು 'ಥ್ಯಾಂಕ್ ಯೂ' ಎನ್ನುತ್ತಾ ಕೆನ್ನೆಗೆ ಒಂದು ಮುತ್ತು ಕೊಟ್ಟೆ.

ಅದು ಅವನು ನನಗೆ ನೀಡಿದ ಮೊಟ್ಟಮೊದಲ ಉಡುಗೊರೆಯಾಗಿತ್ತು. ತನ್ನೆಲ್ಲಾ ಪ್ರೀತಿಯನ್ನು ಧಾರೆಯೆರೆದು, ನಾನೂ ಒಬ್ಬ ಟೀಚರ್ ಎಂಬುದನ್ನು ನೆನಪು ಮಾಡಿಕೊಂಡು ತಂದುಕೊಟ್ಟ ಆ ಪೆನ್ ಆ ಕ್ಷಣ ನನಗೆ ಅತ್ಯಂತ ಅಮೂಲ್ಯವಾದುದೆಂದು ಭಾಸವಾಯಿತು. 'ನಾನು ಇದನ್ನು ಬಳಸುವುದಿಲ್ಲ. ಈ ದಿನದ ಸವಿನೆನಪಿಗಾಗಿ ಹಾಗೇ ಇಟ್ಟುಕೊಳ್ಳುತ್ತೇನೆ. ಜೋಪಾನವಾಗಿಡು' ಎಂದು ಅವನ ತಾಯಿಗೆ ಹೇಳಿ ಹೊರಟೆ.

'ಬಿತ್ತಿದಂತೆ ಬೆಳೆ' ಎನ್ನುತ್ತಾರೆ. ನಾವು ಯಾವ ಗುಣಗಳನ್ನು , ಮೌಲ್ಯಗಳನ್ನು ಬಿತ್ತುತ್ತೇವೆಯೋ ಅಂತಹುದೇ ಮನಸ್ಥಿತಿಯನ್ನು ಮಕ್ಕಳು ಬೆಳೆಸಿಕೊಳ್ಳುತ್ತಾರೆ. ಹಾಗಾಗಿ ಮಕ್ಕಳು ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಲು ಪೋಷಕರು ಮತ್ತು ಶಿಕ್ಷಕರ ಪಾತ್ರ ಮಹತ್ವದ್ದಾಗಿರುತ್ತದೆ. ಪ್ರೀತಿ, ಅನುಕಂಪ, ಅಂತಃಕರಣಗಳನ್ನು ಮೈಗೂಡಿಸಿಕೊಂಡಿರುವ ಮಗು ಸಮಾಜವಿದ್ರೋಹದಂಥ ನೀಚಕೆಲಸಗಳಲ್ಲಿ ತೊಡಗಿಕೊಳ್ಳಲಾರದು.

'ಮನೆಯೇ ಮೊದಲ ಪಾಠಶಾಲೆ; ತಾಯಿಯೇ ಮೊದಲ ಗುರು' ಎಂಬ ನುಡಿಗಟ್ಟು ಎಲ್ಲರಿಗೂ ತಿಳಿದಿರುವಂಥದ್ದೇ . ಜನ್ಮ ನೀಡಿದ ತಾಯಿ ತನ್ನ ಎದೆಹಾಲುಣಿಸಿ ಬೆಳೆಸುವುದಷ್ಟೇ ಅಲ್ಲದೆ ತಾನೇ ಮೊದಲ ಗುರುವಾಗುತ್ತಾಳೆ. ಅನೇಕ ಪದಪುಂಜಗಳನ್ನು ಮಗು ಕಲಿಯುವುದು ತಾಯಿಯಿಂದಲೇ. ಆದ್ದರಿಂದಲೇ ನಾವಾಡುವ ಭಾಷೆಯನ್ನು 'ಮಾತೃಭಾಷೆ' ಎನ್ನುವುದು. ತನಗೆಷ್ಟೇ ಕೆಲಸಕಾರ್ಯಗಳ ಒತ್ತಡಗಳಿದ್ದರೂ, ದೈಹಿಕ ಬಳಲಿಕೆಯಿದ್ದರೂ ಮಗುವಿಗಾಗಿ ತಾಯಿ ತನ್ನ ಜೀವನವನ್ನೇ ಮುಡಿಪಾಗಿಡುತ್ತಾಳೆ. ಮೊದಲ ಒಂದೆರಡು ವರ್ಷಗಳ ಕಾಲ ಮಗುವಿಗೆ ಶಾಲೆಯವರು ಕೊಡುತ್ತಿದ್ದ ಹೋಂವರ್ಕ್‌ಗಳನ್ನು, ಅಸೈನ್‌ಮೆಂಟ್‌ಗಳನ್ನು ತಾನೇ ಮಾಡುತ್ತಿದ್ದ ನನ್ನಾಕೆಯನ್ನು ಕಂಡು ಎಷ್ಟೋ ಬಾರಿ ಅಯ್ಯೋ ಪಾಪ ಎನಿಸಿದ್ದಿದೆ. ಮಗುವಿನ ಸರ್ವತೋಮುಖ ಬೆಳವಣಿಗೆಯಲ್ಲಿ ತಂದೆಯ ಪಾತ್ರವೇನೂ ಕಡಿಮೆಯಾದುದಲ್ಲ. ಅಗತ್ಯಗಳನ್ನು ಪೂರೈಸುವುದರ ಜೊತೆಜೊತೆಗೆ ಅದನ್ನು ಒಂದು ಉತ್ತಮ ನಾಗರಿಕನನ್ನಾಗಿ ರೂಪುಗೊಳಿಸುವಲ್ಲಿ ತಂದೆಯ ಜವಾಬ್ದಾರಿ ಸಾಕಷ್ಟಿರುತ್ತದೆ. ಜೀವನ ಮೌಲ್ಯ ಮತ್ತು ಒಳಿತು ಕೆಡುಕುಗಳ ಅರಿವು ಮೂಡಿಸುತ್ತ, ತಪ್ಪು ಮಾಡಿದರೆ ತಿದ್ದುತ್ತ, ಆಗಾಗ ಸೌಮ್ಯವಾಗಿ ಶಿಕ್ಷಿಸುತ್ತಾ ಪಾಲನೆ ಮಾಡುವವನೇ ತಂದೆ. ಅದಕ್ಕಾಗಿ ಅವನೇ ಒಂದು ಮಾದರಿ ವ್ಯಕ್ತಿ (ರೋಲ್ ಮಾಡೆಲ್) ಆಗಿರಬೇಕಾಗಿರುತ್ತದೆ. ಯಾರು ತನ್ನ ಮಗುವಿನಿಂದ ನನ್ನ ತಂದೆಯೇ ನನಗೆ ರೋಲ್ ಮಾಡೆಲ್ ಎನಿಸಿಕೊಳ್ಳುತ್ತಾನೋ ಅವನೇ ಶ್ರೇಷ್ಠ ತಂದೆ.

ತಂದೆತಾಯಂದಿರ ಜೊತೆ ಮನೆಯ ಪರಿಸರವೂ ಮಗುವಿನ ಬದುಕಿನಲ್ಲಿ ಅಷ್ಟೇ ಪ್ರಮುಖವಾದುದು. ಯಾವ ಮನೆ ಪ್ರೀತಿಯ ದೇಗುಲವಾಗಿರುತ್ತದೋ ಅಲ್ಲಿ ಬೆಳೆಯುವ ಮಗು ನಿಜಕ್ಕೂ ಅದೃಷ್ಟವಂತ ಮಗು ಎನ್ನಬಹುದು. ಒಡಹುಟ್ಟಿದವರು , ಅಜ್ಜ ಅಜ್ಜಿಯರು ಇವರೆಲ್ಲರ ಪ್ರೀತಿಯ ಸವಿಯುಂಡ ಮಗು ತಾನೂ ಒಂದು ಪ್ರೀತಿಯ ಸಾಗರವೇ ಆಗುವುದರಲ್ಲಿ ಸಂಶಯವಿಲ್ಲ. ಹಾಗಾಗಿಯೇ ಹಿಂದಿನ ಕೂಡುಕುಟುಂಬಗಳು ಇಂದಿಗೂ ಮಾದರಿ.

ಮಗುವಿನ ಬೆಳವಣಿಗೆಯಲ್ಲಿ ಶಿಕ್ಷಕರ ಪಾತ್ರ ಎಂಥದ್ದೆಂದು ತಿಳಿದಿರುವಂಥದ್ದೇ. ತಂದೆತಾಯಿಯ ನಂತರ ಪೂಜನೀಯ ಸ್ಥಾನ ಲಭಿಸಿರುವುದು ಶಿಕ್ಷಕರಿಗೆ ಮಾತ್ರ. ಕತ್ತಲೆಯನ್ನು ಹೋಗಲಾಡಿಸಿ ಬೆಳಕಿನ ದಾರಿ ತೋರುವ ಗುರುವಿಗೆ ದೇವರ ಸ್ಥಾನ ಕಲ್ಪಿಸಲಾಗಿದೆ . ಎಲ್ಲೋ ಕೆಲವು ಅಪವಾದಗಳನ್ನು ಹೊರತುಪಡಿಸಿದರೆ ಹೆಚ್ಚಿನ ಶಿಕ್ಷಕರು ಹಾಗೆಯೇ ಇರುತ್ತಾರೆ. ಇಂದು ನನ್ನ ವಿಷಯಕ್ಕೇ ಬಂದರೆ ಜೀವನದಲ್ಲಿ ನಾನೇನು ಆಗಿರುವೆನೋ ಅದಕ್ಕೆ ತಿದ್ದಿ ತೀಡಿ ವಿದ್ಯೆ ಬುದ್ಧಿ ಕಲಿಸಿದ ಶಿಕ್ಷಕರು ಕಾರಣಕರ್ತರು ಎಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ.

ಒಟ್ಟಿನಲ್ಲಿ ತಂದೆತಾಯಿ, ಶಿಕ್ಷಕರು, ಪರಿಸರ ಎಲ್ಲವೂ ಪೂರಕವಾಗಿದ್ದರೆ ಒಂದು ಮಗು ಆರೋಗ್ಯವಂತ ಸತ್ಪ್ರಜೆಯಾಗಿ ರೂಪುಗೊಳ್ಳಬಲ್ಲದು. ■